## ಕವಿತೆ




**ಸತ್ಯಮಂಗಲ ಮಹಾದೇವ**

ಕಲೆ: ಎಸ್.ವಿ.ಹೂಗಾರ್


# ನಗು ಮಗುವೇ

ಓ ಮಗುವೆ ನಗು ಒಂದು ನಗೆಯ
ಹೂವಿನ ತುಟಿಮೇಲೆ ನಗುವ ನೀರಿನ ಹಾಗೆ
ನಿನ್ನ ತುಟಿಯಲ್ಲಿ ನಗು ಮಿನುಗಲಿ
ನಿನ್ನ ಮನ ಮೊಬೈಲನು ದಾಟಿ
ಗುಬ್ಬಚ್ಚಿ ಚಿಂವ್‌ಗುಡುವ ಸ್ವರದೊಳಿರಲಿ

ನಗು ಮಗುವೇ
ಹೊಸ ಬಟ್ಟೆ ತೊಟ್ಟಾಗ ಹಿರಿಹಿಗ್ಗಿ
ಕುಣಿಕುಣಿದು ಜಿಗಿದ ಕಾಲಿನ ಹಿಗ್ಗು
ಸಿಹಿಯ ತಿನ್ನಲು ನುಗ್ಗಿ
ಬಾಯೆಲ್ಲ ಮೆತ್ತಿದಾ ಚಾಕೊಲೇಟಿಗೆ
ನಾಲಗೆಯ ಸವರಿ ಚಪ್ಪರಿಸಿದಾ ದಿನವ
ದಿನಕೊಮ್ಮೆಯಾದರು ಚಪ್ಪರಿಸು ಮಗುವೆ

ನಗು ಮಗುವೇ
ಚೋಟಾ ಭೀಮ್ ಚಿತ್ರಗಳಲ್ಲಿ
ಗದೆಯೇರಿಸಿ ಹೆಗಲಿಗೆ ಹೊರಟ ಉತ್ಸಾಹಕೆ
ಜೀವ ಕೊಡು ಒಂದು ಗಳಿಗೆ
ಸುಳ್ಳು ಹೇಳಿ ಪೆಟ್ಟು ತಿಂದು ಅಮ್ಮನ ಕಿವಿಯಲಿ
ಸತ್ಯ ಹೇಳಿ ನಿಟ್ಟುಸಿರು ಬಿಟ್ಟಾಗ
ಅವಳ ಮುಖದಲಿ ಮಿನುಗಿದ ಕಾಂತಿಯನು
ಮುಡಿದ ಗಳಿಗೆಯ ಒಮ್ಮೆ ಧರಿಸು ಮಗುವೇ

ನಗು ಮಗುವೇ
ಹಟವಿಡಿದು ಕೂತೆಯಾ
ರಚ್ಚೆಯ ಮಾತಾಡಿದೆಯಾ
ಕಾಲುಗಳೊದರಿ ನೆಲದಲ್ಲಿ ಒದ್ದಾಡಿ ಗೆದ್ದೆಯಾ
ಮಕಾಡೆ ಮಲಗಿ ಮುನಿಸಿಂದ ಸೋಲಿಸಿದೆಯಾ
ಯಾವುದಿರಲಿ ಹೇಳು ಯಾವುದಾರೊಂದು
ಹೂನಗೆಯ ತಂದು
ಈ ಜಗದ ತುಟಿಗಳಿಗೆ ತೊಡಿಸದಿಹೆಯಾ

